DEPARTMENT OF STATE EDUCATIONAL RESEARCH AND TRAINING
Phone 080 28980100
Fax 080

ಸಂಖ್ಯೆ:DPI.DSERT/ETC-8/IT@S/Status report/44/2018-19. ದಿನಾಂಕ:01/10/2021

## ಸುತ್ತೋಲೆ

ವಿಷಯ : 2016–17ನೇ ಸಾಲಿನಿಂದ ಈವರೆಗೆ TALP ಕಾರ್ಯಕ್ರಮದಡಿಯಲ್ಲಿ ಸರ್ಕಾರಿ ಪ್ರೌಢಶಾಲೆಗಳಿಗೆ ಸರಬರಾಜು ಮಾಡಿರುವ ಲ್ಯಾಪ್‌ಟಾಪ್, ಪ್ರೊಜೆಕ್ಟರ್ ಮತ್ತು ಆಲ್ ಇನ್ ಒನ್ ಕಂಪ್ಯೂಟರ್‌ಗಳ ನಿರ್ವಹಣೆ ಬಗ್ಗೆ.

ಉಲ್ಲೇಖ: ಜುಲೈ 2021ರಲ್ಲಿದ್ದಂತೆ ಡಯಟ್‌ಗಳಿಂದ ಪಡೆದ ಲ್ಯಾಪ್‌ಟಾಪ್, ಪ್ರೊಜೆಕ್ಟರ್ ಮತ್ತು ಕಂಪ್ಯೂಟರ್‌ಗಳ ಉಪಯೋಗ ಮತ್ತು ಸ್ಥಿತಿಗತಿ ವರದಿಗಳನ್ವಯ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2016–17ನೇ ಸಾಲಿನಿಂದ ಈವರೆಗೆ TALP ಕಾರ್ಯಕ್ರಮದಡಿಯಲ್ಲಿ ಸರ್ಕಾರಿ ಪ್ರೌಢಶಾಲೆಗಳಿಗೆ ಲ್ಯಾಪ್‌ಟಾಪ್, ಪ್ರೊಜೆಕ್ಟರ್ ಮತ್ತು ಆಲ್ ಇನ್ ಒನ್ ಕಂಪ್ಯೂಟರ್‌ಗಳನ್ನು ಟೆಂಡರ್ ಮೂಲಕ ಗುರ್ತಿಸಿದ ಏಜೆನ್ಸಿರವರಿಂದ ಸರಬರಾಜು ಮಾಡಿದ್ದು 5 ವರ್ಷಗಳ Preventive maintainance ಸಹ ಏಜೆನ್ಸಿಯವರದ್ದೆ ಆಗಿರುತ್ತದೆ. ಸದರಿ ಏಜೆನ್ಸಿಯವರು ತ್ರೈಮಾಸಿಕ/ಅರ್ಧವಾರ್ಷಿಕ ಎ.ಎಂ.ಸಿ ನಿರ್ವಹಿಸಲು ಶಾಲೆಗಳಿಗೆ ಬೇಟಿ ನೀಡಿದಾಗ ಸಮಸ್ಯೆ/ದೋಷಗಳನ್ನು ಸರಿಪಡಿಸಿಕೊಂಡು ಉಪಕರಣಗಳನ್ನು ಸುಸ್ಥಿತಿಯಲ್ಲಿಡುವುದು ಹಾಗೂ ಉಪಕರಣಗಳು ಆಗಿಂದಾಗ್ಗೆ ದುರಸ್ಥಿಗೆ ಬಂದಾಗ ಕೂಡಲೇ ಸುಸ್ಥಿತಿಗೆ ತರುವುದಾಗಿದೆ ಈ ಬಗ್ಗೆ ಪ್ರತಿ ಉಪಕರಣಗಳ ಸರಬರಾಜು ಸಂದರ್ಭದಲ್ಲಿ ವಿವರವಾದ ಸುತ್ತೋಲೆ, ಮಾರ್ಗಸೂಚಿಗಳನ್ನು ಈ ಕಛೇರಿಯಿಂದ ನೀಡಿದೆ, ಅಲ್ಲದೆ ಡಯಟ್ ಪ್ರಾಂಶುಪಾಲರ ಸಭೆಗಳಲ್ಲಿ ವೀಡಿಯೋ ಕಾನ್ಫರೆನ್ಸ್‌ಗಳಲ್ಲೂ ತಿಳಿಸಿದೆ.

ಉಪಕರಣಗಳ ಕಾರ್ಯನಿರ್ವಹಣೆಯಲ್ಲಿ ಸಮಸ್ಯೆ/ದೋಷಗಳುಂಟಾದಲ್ಲಿ ಲ್ಯಾಪ್‌ಟಾಪ್, ಪ್ರೊಜೆಕ್ಟರ್ ಮತ್ತು ಆಲ್ ಇನ್ ಒನ್ ಕಂಪ್ಯೂಟರ್‌ಗಳನ್ನು ಸರಿಪಡಿಸಲು ಉಪಕರಣಗಳನ್ನು ಪೂರೈಸಿದ ಸಂಸ್ಥೆಯ toll free ನಂಬರ್ ಗೆ ದೂರವಾಣಿ ಕರೆ ಮೂಲಕ ಅಥವಾ ವೆಬ್‌ಸೈಟ್ ಮೂಲಕ ಅಥವಾ ಇ–ಮೇಲ್ ಮೂಲಕ ದೂರನ್ನು ದಾಖಲಿಸಿ ಉಪಕರಣಗಳನ್ನು ದುರಸ್ಥಿ ಮಾಡಿಸಿಕೊಂಡು ಗರಿಷ್ಠ ಮಟ್ಟದಲ್ಲಿ ಬಳಸಲು ಕ್ರಮ ವಹಿಸುವುದು ಶಾಲಾ ಮುಖ್ಯ ಶಿಕ್ಷಕರ ಜವಾಬ್ದಾರಿಯಾಗಿದೆ.

ಲ್ಯಾಪ್‌ಟಾಪ್, ಪ್ರೊಜೆಕ್ಟರ್ ಮತ್ತು ಕಂಪ್ಯೂಟರ್‌ಗಳಲ್ಲಿ ಕಂಡು ಬಂದಿರುವ ಸಮಸ್ಯೆ/ದೋಷಗಳನ್ನು toll free ನಂಬರ್ ಗೆ ದೂರವಾಣಿ ಕರೆ ಮೂಲಕ ಅಥವಾ ವೆಬ್‌ಸೈಟ್ ಮೂಲಕ ಅಥವಾ ಇ–ಮೇಲ್ ಮೂಲಕ ದೂರನ್ನು ದಾಖಲಿಸದೆ ಡಯಟ್‌ಗಳಿಂದ ಡಿ.ಎಸ್.ಇ.ಆರ್.ಟಿ ಯು ಪಡೆಯುವ ಉಲ್ಲೇಖಿದಂತಹ ಮಾಹಿತಿಗಳಲ್ಲಿ ದೂರು ನೀಡಿರುವ ಬಗ್ಗೆ ಮಾಹಿತಿ ಕಂಡುಬಂದಿದೆ. ಈ ದೂರುಗಳನ್ನು ಯಾರಿಗೆ?, ಯಾವಾಗ? ಸಲ್ಲಿಸಿರುವುದು ಎಂಬುದು ಸ್ಪಷ್ಟವಾಗಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಏಜೆನ್ಸಿಗಳು ನೀಡುವ ಎ.ಎಂ.ಸಿ ವರದಿಗೂ ಡಯಟ್‌ನಿಂದ ಬರುವ ವರದಿಗಳಿಗೂ ತಾಳೆ ಹೊಂದದೆ ಗೊಂದಲವುಂಟಾಗಿದೆ.

ಪ್ರಯುಕ್ತ ಇನ್ನು ಮುಂದೆ ಉಪಕರಣಗಳ ಸಮಸ್ಯೆ/ದೋಷಗಳನ್ನು ಗುರ್ತಿಸಿದ ಕೂಡಲೇ ಸಂಬಂಧಿಸಿದ toll free ನಂಬರ್ ಗೆ ದೂರವಾಣಿ ಕರೆ ಮೂಲಕ ಅಥವಾ ವೆಬ್‌ಸೈಟ್ ಮೂಲಕ ಅಥವಾ ಇ–ಮೇಲ್ ಮೂಲಕ ದೂರನ್ನು ದಾಖಲಿಸುವುದು ಇಲ್ಲವಾದಲ್ಲಿ ಶಾಲೆಯ ಮುಖ್ಯ ಶಿಕ್ಷಕರೇ ನೇರ ಹೊಣೆಗಾರರಾಗುತ್ತಾರೆ ಎಂಬ ಬಗ್ಗೆ ಶಾಲಾ ಮುಖ್ಯ ಶಿಕ್ಷಕರಿಗೆ ಮನವರಿಕೆ ಮಾಡಲು ತಿಳಿಸಿದೆ.

(ವಿ.ಸೂ: ಈವರೆಗೆ TALP ಕಾರ್ಯಕ್ರಮದಡಿಯಲ್ಲಿ ಶಾಲೆಗಳಿಗೆ ಪೂರೈಕೆಯಾದ ಲ್ಯಾಪ್‌ಟಾಪ್, ಪ್ರೊಜೆಕ್ಟರ್ ಮತ್ತು ಕಂಪ್ಯೂಟರ್‌ಗಳ ಏಜೆನ್ಸಿ ವಿವರ ಮತ್ತು ದೂರು ದಾಖಲುಗಾಗಿ ವಿವರಗಳನ್ನು ಅನುಬಂದದಲ್ಲಿ ಲಗತ್ತಿಸಿದೆ.)

for ನಿರ್ದೇಶಕರು, 11/10
ಡಿ.ಎಸ್.ಇ.ಆರ್.ಟಿ, ಬೆಂಗಳೂರು.

ಇವರಿಗೆ,

1. ರಾಜ್ಯದ ಎಲ್ಲಾ ಡಯಟ್ ಪ್ರಾಂಶುಪಾಲರಿಗೆ ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ.
2. ಸಂಬಂಧಿಸಿದ ಶಾಲೆಗಳ ಮುಖ್ಯಶಿಕ್ಷಕರುಗಳಿಗೆ, ಪ್ರಾಂಶುಪಾಲರು ಡಯಟ್ ರವರ ಮುಖಾಂತರ ಅಗತ್ಯ ಕ್ರಮಕ್ಕಾಗಿ.

D:\prakash 2019-20\Bank guarantee return to Nsyne.docx

Scanned by CamScanner

| TALP ಅಡಿಯಲ್ಲಿ ಈವರೆಗೆ ಶಾಲೆಗಳಿಗೆ ಪೂರೈಕೆಯಾದ ಲ್ಯಾಪ್ ಟಾಪ್, ಪ್ರೊಜೆಕ್ಟರ್, ಆಲ್ ಇನ್ ಒನ್ ಕಂಪ್ಯೂಟರ್ ಮತ್ತು ಯು.ಪಿ.ಎಸ್ ಗಳು ದುರಸ್ಥಿಗೆ ಬಂದಾಗ ದೂರು ದಾಖಲು ಮಾಡುವ ವಿವರ | | | | | | |
|---|---|---|---|---|---|---|
| ಉಪಕರಣದ ಹೆಸರು | ಮಾದರಿ | ಶಾಲೆಗಳಿಗೆ ಸರಬರಾಜಾದ ವರ್ಷ | ದೂರು ದಾಖಲಿಸುವ ವಿವರ | | | ಏಜೆನ್ಸಿ ಹೆಸರು ಮತ್ತು ವಿಳಾಸ |
| | | | Toll free ಸಂಖ್ಯೆ | E-Mail ವಿಳಾಸ | Web tracking ID | |
| ಲ್ಯಾಪ್‌ಟಾಪ್ | DELL | 2017-18 | 18004258045 / 08025108037 | india_retail_care@dell.com | URL:http://www.dell.com/support/incidents-online/in | Nsyne Systems & Solutions India Pvt Ltd. #382,3rd main, vinayaka nagar 'B'Block, HAL 2nd stage, Bangalore |
| ಆಲ್ ಇನ್ ಒನ್ ಕಂಪ್ಯೂಟರ್ | LENOVO | 2019-20 | 180030101855 | help.desk.tx@hitachi-systems.com | url:https://global-servicedesk.hitachi-systems-mc.com | Hitachi Systems Micro Clinic Pvt.Ltd. Vajram complex, 1st floor #1, 4th B Block, 17th main Koramangala, Bangalore |
| ಲ್ಯಾಪ್‌ಟಾಪ್ | ACER | 2018-19 | 1800116677 | acersupport@in.aegisglobal.com | esupport.acer-apac.com | Vantage Network Solutions #34/1, 1st Floor, St John's Road, Hermit Colony, Sivanchetti Gardens, Bangalore |
| ಪ್ರೊಜೆಕ್ಟರ್ | HITACHI | 2018-19 | 8041487606 | office@atsindia.co.in | http://support.atslive.co.in | Advanced Technoline Services #609, 1st Floor, 17th 'B'Cross, Indiranagar, 2nd Stage, Bangalore |
| ಲ್ಯಾಪ್‌ಟಾಪ್ | ACER | 2017-18 | 1800116677 | acersupport@in.aegisglobal.com | esupport.acer-apac.com | Vantage Network Solutions #34/1, 1st Floor, St John's Road, Hermit Colony, Sivanchetti Gardens, Bangalore |
| ಪ್ರೊಜೆಕ್ಟರ್ | HITACHI | 2017-18 | 8041487606 | office@atsindia.co.in | http://support.atslive.co.in | Advanced Technoline Services #609, 1st Floor, 17th 'B'Cross, Indiranagar, 2nd Stage, Bangalore |
| ಆಲ್ ಇನ್ ಒನ್ ಕಂಪ್ಯೂಟರ್ | LENOVO | 2021-22 | 180030101855 | help.desk.tx@hitachi-systems.com | url:https://global-servicedesk.hitachi-systems-mc.com | Hitachi Systems Micro Clinic Pvt.Ltd. Vajram complex, 1st floor #1, 4th B Block, 17th main Koramangala, Bangalore |

Scanned by CamScanner